ಇ) ನಾಗಾರ್ಜುನ ಕಂಪನಿಯೊಂದಿಗೆ ಲ್ಯಾಂಕೋ ಕಂಪನಿ ಸೇರ್ಪಡೆಯಾದುದು ಯಾವಾಗ, ಸೇರ್ಪಡೆಗೆ ಅನುಮತಿ ನೀಡಿದ ಪ್ರಾಧಿಕಾರ ಯಾವುದು,

ಈ) ನಾಗಾರ್ಜುನ ಉಷ್ಣಸ್ಥಾವರ ಪ್ರಾರಂಭಿಸಲು ಸ್ಥಳೀಯರ ತೀವ್ರ ವಿರೋಧವಿದ್ದರೂ ಉಷ್ಣಸ್ಥಾವರ ಸ್ಥಾಪನೆಗೆ ಸರ್ಕಾರದ ಒತ್ತಾಯದಿಂದ ಸ್ಥಾವರ ಪ್ರಾರಂಭಿಸಲು ಕಾರಣಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 1994 ರಲ್ಲಿ ಉಷ್ಣ ಸ್ಥಾವರ ಸ್ಥಾಪಿಸಲು ಅನುಮತಿ ನೀಡಲಾಯಿತು

ಆ) ನಾಗಾರ್ಜುನ ವಿದ್ಯುತ್ ಯೋಜನೆಗೆ ಸರ್ಕಾರಿ ಜಮೀನು 69 ಎಕರೆ ನೀಡಿದೆ

ಇ) ಮೆ॥ ಲ್ಯಾನ್ಕೊ ಕಂಪನಿಯವರು ಮೆ॥ ನಾಗಾರ್ಜುನ ವಿದ್ಯುತ್ ನಿಗಮ ನಿಯಮಿತದ ಜೊತೆ ಬಂಡವಾಳ ಹೂಡುತ್ತಿದ್ದಾರೆ ಮೆ॥ ನಾಗಾರ್ಜುನ ವಿದ್ಯುತ್ ನಿಗಮ ನಿಯಮಿತ ಇವರ ಹೇಳಿಕೆ ಪ್ರಕಾರ ಲ್ಯಾಂಕೊ ಕಂಪನಿ ಜೊತೆ 29–05–2006 ರಂದು ಶೇರ್ ಹೊಲ್ಡರ್ ಒಪ್ಪಂದಕ್ಕೆ ಬರಲಾಗಿದೆ ಕಂಪನಿ ಕಾಯಿದೆ 1956 ರ ಪ್ರಕಾರ ಇದಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಶೇರ್ ಹೋಲ್ಡಿಂಗ್ ಪ್ಯಾಟ್ರನ್ ಪ್ರಕಾರ ರಿಜಿಸ್ಟ್ರಾರ್ ಆಫ್ ಕಂಪನೀಸ್ ರವರಿಗೆ ಸಲ್ಲಿಸಿದ್ದಾರೆ ಕರ್ನಾಟಕ ಸರ್ಕಾರದಿಂದ ಯಾವುದೇ ಅನುಮತಿ ಅವಶ್ಯಕತೆ ಇರುವುದಿಲ್ಲ

ಈ) ರಾಜ್ಯ ಅತಿಯಾದ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಕೊರತೆಯು ಕಡಿಮೆಯಾಗಬಹುದು ಕಡಲತೀರದ ವಿದ್ಯುತ್ ಯೋಜನೆಗಳು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಇಂಧನವಾಗಿ ಉಪಯೋಗಿಸಬಹುದಾಗಿದೆ ಆದ್ದರಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಬೆಂಬಲಿಸುತ್ತದೆ

1469 (1685) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ವಿವಿಧ ಪೊಲೀಸ್ ರಾಣೆಗಳಿಗೆ ಒದಗಿಸಲಾಗಿರುವ ವಾಹನಗಳು ಯಾವುವು, (ವಿವರಗಳೇನು)

ಆ) ಜಿಲ್ಲೆಗೆ ಅಗತ್ಯವಿರುವ ವಾಹನಗಳ ಸಂಖ್ಯೆ ಎಷ್ಟು, ಹಾಗೂ ಈ ಪೈಕಿ ಇನ್ನೂ ಎಷ್ಟು ವಾಹನಗಳು ಜಿಲ್ಲೆಗೆ ಬರಬೇಕಾಗಿದೆ, (ಕಛೇರಿವಾರು ಮತ್ತು ರಾಣಾವಾರು ವಿವರಗಳನ್ನು ಒದಗಿಸುವುದು)

ಇ) ಈ ವಾಹನಗಳು ಎಷ್ಟೆಷ್ಟು ಕಿ ಮೀ ಕ್ರಮಿಸಿವೆ ಹಾಗೂ ನಿಯಮಗಳ ಪ್ರಕಾರ ಎಷ್ಟು ಕಿ ಮೀ ಕ್ರಮಿಸಿದ ವಾಹನಗಳನ್ನು ಹಿಂದಕ್ಕೆ ಪಡೆದು ಹೊಸವಾಹನಗಳನ್ನು ನೀಡಬೇಕಾಗಿದೆ,

ಈ) ಇದರ ಅನ್ವಯ ಜಿಲ್ಲೆಗೆ ಎಷ್ಟು ಹೊಸ ವಹನಗಳನ್ನು ನೀಡಬೇಕಾಗುತ್ತದೆ,

ಉ) ಜಿಲ್ಲೆಯಲ್ಲಿರುವ ಬಹುತೇಕ ಪೊಲೀಸ್ ವಾಹನಗಳು ಹಳೆಯದಾಗಿದ್ದು, ದುಸ್ಥಿತಿಯಲ್ಲಿರುವುದರಿಂದ ಇಂತಹ ವಾಹನಗಳನ್ನು ಕೂಡಲೇ ಬದಲಾವಣೆ ಮಾಡಿ ಹೊಸ ವಾಹನಗಳನ್ನು ಜಿಲ್ಲಗೆ ಒದಗಿಸಲಾಗುವುದೇ,

ಊ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ವಾಹನಗಳ ಕೊರತೆಯನ್ನು ನೀಗಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ 28 ಪೊಲೀಸ್ ಠಾಣೆಗಳಿದ್ದು, ಪ್ರತಿ ಪೊಲೀಸ್ ಠಾಣೆಗಳಿಗೆ ವಾಹನ ಒದಗಿಸಿರುವ ವಿವರ ಈ ಕೆಳಗಿನಂತಿದೆ

ಕ್ರ ಸಂ	ಪೊಲೀಸ್ ಠಾಣೆ	ವಾಹನ ಮಾದರಿ/ವರ್ಷ	ವಾಹನದ ಸಂಖ್ಯೆ	ಮೇಜರ್ ದುರಸ್ತಿ	ಮೈನರ್ ದುರಸ್ತಿ	ಚಲಿಸಿರುವ ಕಿ ಮೀ
1	ಬಸವಕಲ್ಯಾಣ ನಗರ ಪೊಲೀಸ್ ಠಾಣೆ	ಜೀಪ್/ 1994	ಕೆಎ–38, ಜಿ–50	2	1	400350
2	ಬಸವಕಲ್ಯಾಣ (ಗ್ರಾ) ಪೊಲೀಸ್ ಠಾಣೆ	ಜೀಪ್/ 2001	ಕೆಎ–38, ಜಿ–139	–	–	212980
3	ಬಸವಕಲ್ಯಾಣ ಸಂಚಾರಿ ಪೊಲೀಸ್ ಠಾಣೆ	ಜೀಪ್/1989	ಸಿಟಿಜಿ–1007	2	2	392354
4	ಹುಲಸೂರು ಪೊಲೀಸ್ ಠಾಣೆ	ಜೀಪ್/1999	ಕೆಎ–01, ಜಿ–3479	1	–	262416
5	ಮುಡಬಿ ಪೊಲೀಸ್ ಠಾಣೆ	ಜೀಪ್/1994	ಕೆಎ–38, ಜಿ–57	1	2	298615
6	ಮಂಠಾಳ ಪೊಲೀಸ್ ಠಾಣೆ	ಜೀಪ್/1994	ಕೆಎ–38, ಜಿ–58	1	3	411568

7	ಹುಮನಾಬಾದ ಪೊಲೀಸ್ ರಾಣೆ	ಜೀಪ್/2001	ಕೆಎ–38, ಜಿ–143	–	–	208659
8	ಹಳ್ಳಿಖೇಡ್ ಪೊಲೀಸ್ ರಾಣೆ	ಜೀಪ್/1993	ಕೆಎ–38, ಜಿ–42	2	1	247038
9	ಚಿಟಗುಪ್ಪ ಪೊಲೀಸ್ ರಾಣೆ	ಜೀಪ್/1994	ಕೆಎ–38, ಜಿ–51	1	1	300760
10	ಮನ್ನಾಎಖೆಳ್ಳಿ ಪೊಲೀಸ್ ರಾಣೆ	ಜೀಪ್/1996	ಕೆಎ–38, ಜಿ–81	1	2	294581
11	ಔರಾದ ಪೊಲೀಸ್ ರಾಣೆ	ಜೀಪ್/2000	ಕೆಎ–38, ಜಿ–136	–	1	175207
12	ಸಂತಪೂರ ಪೊಲೀಸ್ ರಾಣೆ	ಜೀಪ್/1991	ಕೆಎ–38, ಜಿ–23	1	5	386286
13	ಚಿಂತಾಕಿ ಪೊಲೀಸ್ ರಾಣೆ	ಜೀಪ್/2001	ಕೆಎ–38, ಜಿ–144	–	–	140908
14	ಕುಶನೂರ ಪೊಲೀಸ್ ರಾಣೆ	ಜೀಪ್/1992	ಕೆಎ–38, ಜಿ–30	1	3	304378
15	ಕಮಾಲನಗರ ಪೊಲೀಸ್ ರಾಣೆ	ಜೀಪ್/1995	ಕೆಎ–38, ಜಿ–70	1	2	300414
16	ಜನವಾಡಾ ಪೊಲೀಸ್ ರಾಣೆ	ಜೀಪ್/1995	ಕೆಎ–38, ಜಿ–64	1	2	267398
17	ಬೆಗದಲ ಪೊಲೀಸ್ ರಾಣೆ	ಜೀಪ್/1995	ಕೆಎ–38, ಜಿ–67	1	2	255283

18	ನೂತನ ನಗರ ಪೊಲೀಸ್ ಠಾಣೆ	ಜೀಪ್/1997	ಕೆಎ–38, ಜಿ–171	1	4	205580
19	ಗಾಂಧಿ ಗಂಜ ಪೊಲೀಸ್ ಠಾಣೆ	ಜೀಪ್/1990	ಕೆಎ–38, ಜಿ–5	2	2	339197
20	ಮಾರ್ಕೆಟ ಪೊಲೀಸ್ ಠಾಣೆ	ಜೀಪ್/1996	ಕೆಎ–38, ಜಿ–78	1	2	283000
21	ಸಂಚಾರಿ ಪೊಲೀಸ್ ಠಾಣೆ	ಜೀಪ್/2001	ಕೆಎ–38, ಜಿ–137	–	–	166094
22	ಬೀದರ ಗ್ರಾಮೀಣ ಪೊಲೀಸ್ ಠಾಣೆ	ಜೀಪ್/1993	ಕೆಎ–38, ಜಿ–41	2	2	335564
23	ಬೀದರ ನಗರ ಪೊಲೀಸ್ ಠಾಣೆ	ಜೀಪ್/1990	ಕೆಎ–38, ಜಿ–1	1	2	227581
24	ಧನ್ನೂರ ಪೊಲೀಸ್ ಠಾಣೆ	ಜೀಪ್/1997	ಕೆಎ–38, ಜಿ–170	1	1	283517
25	ಖಟಕಚಿಂಚೋಳಿ ಪೊಲೀಸ್ ಠಾಣೆ	ಜೀಪ್/1996	ಕೆಎ–38, ಜಿ–77	1	1	369794
26	ಭಾಲ್ಕಿ ನಗರ ಪೊಲೀಸ್ ಠಾಣೆ	ಜೀಪ್/1994	ಕೆಎ–38, ಜಿ–61	2	1	369403
27	ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ	ಜೀಪ್/2004	ಕೆಎ–38, ಜಿ–178	–	–	143571
28	ಬೇಮಳಖೇಡಾ ಪೊಲೀಸ್ ಠಾಣೆ	ಜೀಪ್/1993	ಕೆಎ–38, ಜಿ–48	2	2	282547

ಆ) ಹಳೆಯ ಮತ್ತು ನಿರುಪಯುಕ್ತಗೊಳಿಸಬೇಕಾದ ವಾಹನಗಳ ಬದಲಿಗೆ ರಾಣೆವಾರು ಕರ್ತವ್ಯಕ್ಕೆ 8 ಜೀಪುಗಳ ಅಗತ್ಯವಿರುತ್ತದೆ (ಕಛೇರಿವಾರು ಮತ್ತು ರಾಣೆವಾರು ವಿವರ ಈ ಕೆಳಗಿನಂತಿದೆ)

1) ಬಸವಕಲ್ಯಾಣ ಸಂಚಾರಿ ಪೊಲೀಸ್ ರಾಣೆ

2) ಬಸವಕಲ್ಯಾಣ ನಗರ ಪೊಲೀಸ್ ರಾಣೆ

3) ಮಂರಾಳ ಪೊಲೀಸ್ ರಾಣೆ

4) ಮುಡಬಿ ಪೊಲೀಸ್ ರಾಣೆ

5) ಸಂತಪೂರ ಪೊಲೀಸ್ ರಾಣೆ

6) ಕುಶನೂರು ಪೊಲೀಸ್ ರಾಣೆ

7) ಗಾಂಧಿ ಗಂಜ ಪೊಲೀಸ್ ರಾಣೆ

8) ಖಟಕಚಿಂಚೋಳಿ ಪೊಲೀಸ್ ರಾಣೆ

ಸದರಿ ರಾಣೆಗಳ ಜೀಪುಗಳು ಹಳೆಯದಾಗಿರುವರಿಂದ ಅವುಗಳ ಬದಲಿಗೆ ಹೊಸ 8 ಜೀಪುಗಳು ತರಿಸಿಕೊಳ್ಳಬೇಕಾಗಿದೆ

ಇ) ಕ್ರಮಿಸಿದ ಕಿ ಮೀ ಆಯಾ ಪೊಲೀಸ್ ರಾಣೆಗಳ ವಾಹನಗಳ ಮುಂದೆ ನಮೂದಿಸಲಾಗಿದ್ದು, ನಿಯಮಗಳ ಪ್ರಕಾರ ಯಾವುದೇ ಒಂದು ವಾಹನ ನಿಷ್ಪ್ರಯೋಜಕಗೊಳಿಸಬೇಕಾದರೆ, ಅದು ಸುಮಾರು 15 ವರ್ಷ ಹಳೆಯದಾಗಿರಬೇಕು ಮತ್ತು ಅದರ ಸೇವಾವಧಿಯಲ್ಲಿ (2) ಸಲ ಮೇಜರ್ ಮತ್ತು (3) ಸಲ ಮೈನರ್ ದುರಸ್ತಿ ಮಾಡಿಸಬೇಕು ಹಾಗೂ ನಿಷ್ಪ್ರಯೋಜಕಗೊಳಿಸಬೇಕಾದ ವಾಹನ ಕನಿಷ್ಠ 3,42,000 ಕಿ ಮೀ ಚಲಿಸಬೇಕಾಗಿರುತ್ತದೆ ಅದಾದನಂತರ ಅದರ ಬದಲಿ ಬೇರೆ ಹೊಸ ವಾಹನ ಖರೀದಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ

ಈ) ಬೀದರ್ ಜಿಲ್ಲೆ ಉಪವಿಭಾಗ ಪೊಲೀಸ್ ಅಧಿಕಾರಿ ಮತ್ತು ವೃತ್ತ ಪೊಲೀಸ್ ಅಧಿಕಾರಿಯವರ ಕಛೇರಿ ವಾಹನಗಳು ಹೊಸ ಸುಸ್ಥಿತಿಯಲ್ಲಿರುವ ವಾಹನಗಳಾಗಿವೆ ಮತ್ತು ಎಂಟು ಪೊಲೀಸ್ ರಾಣೆ ಜೀಪುಗಳು ಹಳೆಯದಾಗಿದ್ದು, ಅವುಗಳ ಅವಧಿ

ಮುಗಿಯುತ್ತಲಿವೆ ನಿಗದಿತ ವಾಹನ ಚಲಿಸಿದ (3,47,000) ಅಂತರ ಸಮೀಪಿಸುತ್ತಲಿವೆ, ಅವುಗಳ ಬದಲಿಗೆ ಹೊಸ ಎಂಟು ಜೀಪುಗಳು ನೀಡಬೇಕಾಗುತ್ತದೆ ಇದರನ್ವಯ ಎಂಟು ಪೊಲೀಸ್ ಠಾಣೆಗಳಿಗೆ ಹೊಸ ವಾಹನ ನೀಡಬೇಕಾಗುತ್ತದೆ

ಉ) ಆಧುನೀಕರಣ ಅಡಿಯಲ್ಲಿ ಮುಂಬರುವ ಆರ್ಥಿಕ ವರ್ಷದಲ್ಲಿ ಹೊಸ ವಾಹನ ಖರೀದಿಗಾಗಿ ಕ್ರಮ ತೆಗೆದುಕೊಳ್ಳಲಾಗುವುದು

ಊ) 2006–07 ನೇ ಸಾಲಿನಲ್ಲಿ ಒಂದು ಅಂಬಾಸಿಡರ್ ಕಾರು, 4 ಜೀಪುಗಳು ಮತ್ತು ಮೋಟಾರ್ ಸೈಕಲ್‌ಗಳನ್ನು ಆಧುನೀಕರಣ ಮತ್ತು 12 ನೇ ಹಣಕಾಸು ಯೋಜನೆಯಡಿಯಲ್ಲಿ ವಾಹನಗಳನ್ನು ಖರೀದಿಸಿ ಬೀದರ್ ಜಿಲ್ಲೆಗೆ ಹಂಚಿಕೆ ಮಾಡಲಾಗಿರುತ್ತದೆ ಮುಂದಿನ ವಾರ್ಷಿಕ ವರ್ಷ 2007–08 ರಲ್ಲಿಯೂ ಸಹ ಆಧುನೀಕರಣ ಯೋಜನೆಯಡಿಯಲ್ಲಿ ವಾಹನಗಳನ್ನು ಖರೀದಿಸಿ ಅವಶ್ಯಕತೆಗೆ ತಕ್ಕಂತೆ ವಾಹನಗಳನ್ನು ಹಂಚಿಕೆ ಮಾಡಲಾಗುವುದು

1470 (1821) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳು ಚಾಲನೆಯಲ್ಲಿರುವುವುಗಳೆಷ್ಟು, (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಇದಕ್ಕಾಗಿ ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು, (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಈ ಭಾಗದಲ್ಲಿ ನೀರು ಸರಬರಾಜಿನ ಎಷ್ಟು ಯೋಜನೆಗಳ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ,

ಈ) ಈ ಯೋಜನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ನೀಡಲಾಗುವುದೇ (ಪ್ರಸ್ತಾವನೆಗಳ ಪೂರ್ಣ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಒದಗಿಸುವುದು?